
1 chapter
ಅಧ್ಯಾಯ-ಒಂದು
ಅಧ್ಯಯನದ ಉದ್ದೇಶ
ಮತ್ತು ವ್ಯಾಪ್ತಿ

# ಅಧ್ಯಾಯ – ಒಂದು

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಒಂದು ಪ್ರದೇಶದ ಭಾಷೆ ಜೀವಂತವಾಗಿ ಉಳಿದು ಬೆಳೆಯಬೇಕಾದರೆ ಶಿಕ್ಷಣವು ಆ ಪ್ರದೇಶದ ಭಾಷೆಯಲ್ಲಿಯೇ ನಡೆಯಬೇಕಾಗುತ್ತದೆ. ಆಗ ಅದು ಸಂಸ್ಕಾರ ಹೊಂದಿ ಬೆಳೆದು, ಗುರುಸ್ಥಾನದಲ್ಲಿರಲು ಸಾಧ್ಯ. ಹಾಗಾಗದಿದ್ದರೆ ಕಾಲಾಂತರದಲ್ಲಿ ಇತರ ಭಾಷೆ ಪ್ರಾದೇಶಿಕ ಭಾಷೆಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುವುರಲ್ಲಿ ಸಂದೇಹವಿಲ್ಲ.

'ಕಾವೇರಿಯಿಂದಮಾ ಗೋದಾವರಿವರಂ ಇರ್ದ' ಕನ್ನಡನಾಡು ಕಾಲಾಂತರದಲ್ಲಿ ಅನ್ಯ ರಾಜಕೀಯ ವಿಷಚಕ್ರದಲ್ಲಿ ಸಿಲುಕಿ, ಅನ್ಯಭಾಷೆಗಳ ಒತ್ತಡದಲ್ಲಿ ಬಳಲುತ್ತಾ ಹಿಮ್ಮೆಟ್ಟತೊಡಗಿತು. ಹಿಂದಿನ ಈ ಎಲ್ಲಾ ರಾಜಕೀಯ ಸ್ಥಿತ್ಯಂತರಗಳಂತೆ ಪೇಶ್ವೆಯರ ಆಡಳಿತದಲ್ಲಿ ಯೋಜನಾಬದ್ಧವಾಗಿ ಕನ್ನಡ ನಾಡು ನುಡಿಗಳನ್ನು ನಾಶ ಮಾಡುವ ಪ್ರಯತ್ನ ಕನ್ನಡಿಗರಿಗೆ ಅರಿತೋ, ಅರಿಯದಂತೆಯೋ ನಡೆದು ಹೋದ ಘಟನೆ.

ಕವಿರಾಜಮಾರ್ಗಕಾರ ಹೇಳುವ ತಿರುಳ್ಗನ್ನಡ ಪ್ರದೇಶ 'ಒಕ್ಕುಂದ' ಬೆಳಗಾವಿ ಜಿಲ್ಲೆಯಲ್ಲಿದೆ ಎಂದ ಮೇಲೆ ಬೆಳಗಾವಿ ತಿರುಳ್ಗನ್ನಡ ಪ್ರದೇಶವೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ನಂತರದ ಶತಮಾನಗಳಲ್ಲಿ ಅಚ್ಚಗನ್ನಡದ ಪ್ರದೇಶಗಳು ಮುಂಬಯಿ, ಮದ್ರಾಸ, ಹೈದರಾಬಾದ್ ಮೈಸೂರು ಹಾಗೂ ಕೊಡಗು ಪ್ರಾಂತ್ಯಗಳಲ್ಲಿ ಹರಡಿ ಹಂಚಿ ಹೋಗಿದ್ದವು. ವಿಜಯನಗರ ಮತ್ತು ಕೆಳದಿ ರಾಜ್ಯಗಳ ಪತನದ ನಂತರ ಬ್ರಿಟಿಷರ ಆಡಳಿತಕ್ಕೊಳಪಟ್ಟವು. ಒಟ್ಟಾರೆ ಕರ್ನಾಟಕದ ಸ್ಥಿತಿಗತಿಯೇ ಡೋಲಾಯಮಾನವಾಗಿದ್ದಾಗ ಉತ್ತರ ಕರ್ನಾಟಕದ ಅವಸ್ಥೆ ಇನ್ನು ಶೋಚನೀಯವಾಗಿತ್ತು. ಕನ್ನಡ ಮಾತನಾಡುವ, ವಿಜಾಪುರ, ಬೆಳಗಾವಿ, ಧಾರವಾಡ, ಕಾರವಾರ ಪ್ರದೇಶಗಳಲ್ಲಿ ಮರಾಠಾ ಸಂಸ್ಥಾನಿಕರಾದ ಪಟವರ್ಧನರು ಮರಾಠಿ ಭಾಷೆಯನ್ನು ವ್ಯವಸ್ಥಿತವಾಗಿ ಕನ್ನಡಿಗರ ಮೇಲೆ ಹೇರತೊಡಗಿದರು. ಒಂದೇ ಮಾತಿನಲ್ಲಿ ಹೇಳುವುದಾದರೆ ಮರಾಠಾ, ಮುಸ್ಲಿಂ ಹಾಗೂ ಪಾಶ್ಚಾತ್ಯರ ದಬ್ಬಾಳಿಕೆಯಲ್ಲಿ ಸಿಕ್ಕು ಕನ್ನಡ ಭಾಷೆ ನಲುಗಹತ್ತಿತು.

ಹೀಗಿದ್ದರೂ ಕನ್ನಡ ನಾಡಿನ ಸಾಮಾನ್ಯ ಜನತೆ, ವ್ಯಾಪಾರಿವರ್ಗ ಹಾಗೂ ಕೃಷಿಕವರ್ಗ ಇವರೆಲ್ಲಾ ಲಿಂಗಾಯತರೇ ಆಗಿದ್ದರು. ವಿಲಿಯಂ ರಸೆಲ್ ಹೇಳುವಂತೆ ಸಾಕಷ್ಟು ಶಿಕ್ಷಣವಿಲ್ಲದೆ, ರಾಜಕೀಯ ಪ್ರಜ್ಞೆಯೂ ಇಲ್ಲದೆ ಕನ್ನಡವನ್ನು ಮನೆಮಾತಾಗಿಸಿಕೊಂಡು, ಅದನ್ನು ಗುಪ್ತಗಾಮಿನಿಯಂತೆ ಉಳಿಸಿಕೊಂಡು ಬಂದ ಶ್ರೇಯಸ್ಸಿನ ಸಿಂಹಪಾಲು ವೀರಶೈವರಿಗೆ ಸಲ್ಲುತ್ತದೆ.

ಕ್ರಿ.ಶ. ೧೮೦೦ ರವರೆಗೆ ಪೇಶ್ವೆ ಹಾಗೂ ಪಟವರ್ಧನರ ರಾಜಕೀಯ ಪ್ರಭಾವದಿಂದಾಗಿ ಕನ್ನಡಿಗರು ಮರಾಠಿಯಲ್ಲಿ ಕಲಿಯುತ್ತಿದ್ದನ್ನು ಕನ್ನಡದಲ್ಲಿ ಮಾತನಾಡುವುದನ್ನು ಕಂಡು ಅಂದಿನ ಬ್ರಿಟಿಷ್ ಅಧಿಕಾರಿಗಳು ವಿಚಾರಕ್ಕೀಡಾಗಿದ್ದಾಗಲೇ ಆಗಿನ ಮುಂಬಯಿ ರಸೆಲ್ ಕನ್ನಡದ ಶಿಕ್ಷಕರಾಗಿ ಬಂದ ಸಂದರ್ಭದಲ್ಲಿ ಆದಾಗಲೇ ಡೆ. ಚೆನ್ನಬಸಪ್ಪನವರು ಎಜ್ಯುಕೇಶನಲ್ ಇನ್ಸ್‌ಪೆಕ್ಟರ್ ಆಗಿದ್ದರು. ಈ ಕನ್ನಡನಾಡಿನ ಭಾಷೆ ಇಲ್ಲಿಯ ಜನರ ಕನ್ನಡಿಗರದ್ದು ಎಂಬ ಸ್ಪಷ್ಟ ವಿಚಾರವನ್ನು ಚೆನ್ನಬಸಪ್ಪನವರು ರಸೆಲ್‌ರಿಗೆ ಮನವರಿಕೆ ಮಾಡಿದ ಪರಿಣಾಮವಾಗಿ ರಸೆಲರ ಸಂಪೂರ್ಣ ಬೆಂಬಲ ಚೆನ್ನಬಸಪ್ಪನವರಿಗೆ ದೊರೆಯಿತು.

ಮರಾಠಿ ಶಾಲೆಗಳನ್ನು ಹುಟ್ಟು ಹಾಕುತ್ತಿದ್ದ ಪೇಶ್ವೆಯವರ ಹುನ್ನಾರದ ಕಾಲಘಟ್ಟದಲ್ಲಿ ಕನ್ನಡ ಭಾಷೆ ಬದುಕಿದ್ದು ವೀರಶೈವ ಮಠಮಾನ್ಯಗಳಲ್ಲಿ ಮಾತ್ರ. ಇಂದಿನ ಸಾಲೀಮಠ ಎಂಬ ಅಡ್ಡ ಹೆಸರಿನವರ ಮನೆಗಳಲ್ಲಿ ಮಾತ್ರ ಕನ್ನಡದ ಕಲಿಕೆ ನಡೆಯುತ್ತಿತ್ತು. ಅಂತಹ ಶಾಲೆಗಳಿಗೆ ಅಯ್ಯನವರ ಶಾಲೆಗಳೆಂದು ಕರೆಯುತ್ತಿದ್ದರು. ಇದೆಲ್ಲವೂ ನಡೆದದ್ದು ವೀರಶೈವರಲ್ಲಿ ಸ್ವಯಂ ಪ್ರೇರಣೆಯಿಂದ ಹಾಗೂ ಖಾಸಗಿಯಾಗಿತ್ತಾದರೂ ತದನಂತರದಲ್ಲಿ ಅಂದರೆ *'ಉಳ್ಳವರು ಶಿವಾಲಯ ಮಾಡುವರು ನಾನೇನು ಮಾಡಲಿ ಬಡವನಯ್ಯಾ'* ಎಂಬ ಬಸವಣ್ಣನವರ ವಚನಗಳ ಸಾಲಿನಂತೆಯೇ ಆ ಮಠಗಳು ಶ್ರೀಮಂತ ವೀರಶೈವರಿಗೆ ಮಾತ್ರ ಮೀಸಲಾಗಿದ್ದವಾದರೂ ನಂತರದ ದಿನಗಳಲ್ಲಿ ಸಕಲ ಕನ್ನಡಿಗರಿಗೆ ತೆರೆದುಕೊಳ್ಳುವ ಮೂಲಕ ಮುಂದಿನ ಸಂಘ-ಸಂಸ್ಥೆಗಳಿಗೆ ದಾರಿದೀಪವಾದವು.

ಇಪ್ಪತ್ತನೆಯ ಶತಮಾನದ ಮೊದಲ ದಶಕದವರೆಗೂ ಉತ್ತರ ಕರ್ನಾಟಕದ ಜನತೆ ಹೆಚ್ಚಿನ ಶಿಕ್ಷಣಕ್ಕಾಗಿ ಕೊಲ್ಲಾಪುರ, ಪುಣೆ, ಮುಂಬಯಿಗಳಿಗೆ ಹೋಗಬೇಕಾಗುತ್ತಿತ್ತು. ಮಧ್ಯಮ ಹಾಗೂ ಸಾಮಾನ್ಯ ಜನಸಮುದಾಯವರು ಬಹಳ ಕಷ್ಟಪಡಬೇಕಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯನ್ನು ಪರಿಗಣಿಸಿ ಮುಂಬಯಿಯಲ್ಲಿದ್ದ ಲಿಂಗಾಯತ ವರ್ತಕರು ಧಾರ್ಮಿಕ ಕಾರ್ಯಗಳಿಗಾಗಿ ಮಠವನ್ನು ಕಟ್ಟಿಸಲು ನಿಧಿ ಸಂಗ್ರಹಿಸಿದ್ದರು. ಆದರೆ ಅವರು ಆ ನಿಧಿಯನ್ನು ಉನ್ನತ ವ್ಯಾಸಂಗಕ್ಕಾಗಿ ಬರುವ ಬಡಮಕ್ಕಳಿಗಾಗಿ ಆಶ್ರಮವನ್ನು ಕಟ್ಟಿಸಬೇಕೆಂಬ ಇಚ್ಛೆ ಅವರಲ್ಲಿ ಮೂಡಿ ಅದು ಬಹುಬೇಗ ಕಾರ್ಯಗತವಾಗಿ, ೧೯೧೩ ರ ಮುಂಬಯಿಯಲ್ಲಿ 'ವೀರಶೈವರ ಆಶ್ರಮ' ಪ್ರಾರಂಭವಾಯಿತು.

ಸಾಹಿತ್ಯ, ಜನತೆಯ ಸಂಸ್ಕೃತಿಯ 'ಭಾವಬಿಂಬ' ಅಥವಾ 'ರಸಬಿಂಬ'. ಆಯಾ ಜನ ಸಮುದಾಯದ ಆಶೋತ್ತರಗಳು, ಸೋಲು-ಗೆಲುವುಗಳು, ಘರ್ಷಣೆ, ಸಮನ್ವಯಗಳು, ಕೊಡುಪಡೆಯುವಿಕೆಗಳ ಮೂಲತತ್ವ, ಆಯಾ ಜನಾಂಗ ಸೃಷ್ಟಿಸುವ ಕಲೆ, ಸಾಹಿತ್ಯಗಳಲ್ಲಿ

ಬಿಂಬಿತವಾಗಿರುತ್ತದೆ. ಸಮಾಜ ರಚನೆಯ ಸೈದ್ಧಾಂತಿಕ ಆದರ್ಶ ಅನುಸರಣೆಗಳಲ್ಲಿ ಜೀವನ ನಿರ್ವಹಣೆಯ ಸಾಧನ-ಸಾಮಗ್ರಿಗಳ ಉತ್ಪತ್ತಿ-ಗಳಿಕೆಗಳಲ್ಲಿ ಸಂಘ-ಸಂಸ್ಥೆ, ನಿರ್ಮಾಣ-ನಿರ್ವಹಣೆಗಳಲ್ಲಿ, ರಾಜಕೀಯ ಘಟನಾವಳಿಗಳಲ್ಲಿ ರಾಜ್ಯಾಡಳಿತದ ಇತಿಮಿತಿಗಳಲ್ಲಿ ಜನತೆಯ ಬದುಕಿನ ಬಾಹ್ಯ ಚಿತ್ರದ ಪ್ರತಿಬಿಂಬ ಕಾಣಿಸುತ್ತದೆ.

ವಿಭೂತಿ ಚೇತನ ಪುರುಷರು ಜನತೆಯ ಸಂಸ್ಕೃತಿಯ ಸತ್ಪುತ್ರರು. ಆ ಮಹಾಸತ್ಪುತ್ರರ ಜೀವನವೇ ಸಂಸ್ಕೃತಿಯ ಪುಣ್ಯದ ಸತ್ವವಾಗುತ್ತದೆ. ಜನಜೀವನದ 'ರಸಬಿಂಬ'ವನ್ನು ನೀಡುವ ಅಂಥ ಪ್ರಭಾವಶಾಲಿಗಳ ಜೀವನವೇ ಮುಂದಿನ ಸಾಹಿತ್ಯಸೃಷ್ಟಿಯ ವಸ್ತುವಾಗುತ್ತದೆ, ಆದರ್ಶಪ್ರಾಯವಾಗುತ್ತದೆ. ಅಂಥ ಪುಣ್ಯ ಪುರುಷರು ಜನಸಮುದಾಯದ ನಡೆ-ನುಡಿಗಳಲ್ಲಿ, ಗಾಳಿ, ಬೆಳಕು, ಹೊಳೆ, ಬೆಟ್ಟಗಳಂತೆ 'ಪ್ರಾಕೃತಿಕ ಸತ್ಯ'ಗಳಾಗಿ ಉಳಿದು ಬಿಡುತ್ತಾರೆ. ಅಂಥವರನ್ನೇ ಜನ 'ವಿಭೂತಿಪುರುಷ'ರೆಂದು ಪೂಜ್ಯತೆಯಿಂದ ಗೌರವಿಸುತ್ತಾರೆ. ತಮ್ಮ ಸಂಸ್ಕೃತಿಯ ಸತ್ಪುತ್ರರೆಂದು ಸ್ಮರಿಸುತ್ತಾರೆ, ಪೂಜಿಸುತ್ತಾರೆ. ಪುರಾಣ-ಪುಣ್ಯ ಕಥೆಗಳನ್ನು ಕಟ್ಟಿ, ಹಾಡಿ ಹರಸುತ್ತಾರೆ.

ಕರ್ನಾಟಕದ ಸಂಸ್ಕೃತಿ, ವಿಶಾಲ ಭಾರತೀಯ ಸಾಹಿತ್ಯ ಲೋಕಕ್ಕೆ ಗಣನೀಯವಾದ ಕಾಣಿಕೆಗಳನ್ನು ಕೊಟ್ಟು, ಭಾರತೀಯ ಸಂಸ್ಕೃತಿಯ ಮೇಲೆ ತನ್ನತನದ ಮುದ್ರೆಯನ್ನೊತ್ತಿದೆ. ಭಾರತೀಯ ಸಂಸ್ಕೃತಿ, ಧರ್ಮ, ಸಾಹಿತ್ಯದ ಸಮಾನ ಗುಣಲಕ್ಷಣಗಳನ್ನು ಪಡೆದ ಕರ್ನಾಟಕ ಸಂಸ್ಕೃತಿ, ಕನ್ನಡ ಧರ್ಮ, ಕನ್ನಡ ಸಾಹಿತ್ಯಗಳು ಧಾರ್ಮಿಕ ವಿಚಾರಗಳಿಂದ ಧರ್ಮ ಪುರುಷರ ಚರಿತ್ರೆಗಳಿಂದ ತುಂಬಿ ತುಳುಕುತ್ತಿವೆ. ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕ ಸಂಸ್ಕೃತಿ, ಸಾಹಿತ್ಯ ಹಾಗೂ ಜೀವನ, ವಿನೂತನ ಕ್ರಾಂತಿಗೆ ಗುರಿಯಾದವು. ಬದಲಾವಣೆಯ ಬಹುದೊಡ್ಡ ತೆರೆ ನಾಡಿನ ಜೀವನದ ಮೇಲೆ ಹರಿದು ಹೋಯಿತು. ವೀರಶೈವ ಧರ್ಮದ ಪುನರುತ್ಥಾನ ಹಾಗೂ ಆ ಧರ್ಮದ ಅನುಭಾವಿಗಳು ಕಂಡ ಸ್ವಯಂದರ್ಶನ, ಧರ್ಮಪರಾಯಣ ಕ್ರಾಂತಿಕಾರಕ ವಿಚಾರಗಳು, ಧರ್ಮಾನುಯಾಯಿಗಳ ಭಕ್ತಿ-ನಿಷ್ಠೆಗಳು ಕನ್ನಡ ಸಂಸ್ಕೃತಿಯ ದಿಶೆಯನ್ನೇ ಬದಲಿಸಿದವು.

### ೧.೧ ಅಧ್ಯಯನದ ಉದ್ದೇಶ-ವ್ಯಾಪ್ತಿ

ಯಾವುದೇ ಒಂದು ವಿಷಯದ ಅಧ್ಯಯನಕ್ಕೆ ತೊಡಗಿದಾಗ ವಿವಿಧ ಪ್ರಕಾರಗಳಿಂದ ಬಂದ ಆಕರ ಸಾಮಗ್ರಿಗಳನ್ನು ಶುದ್ಧಿಗೊಳಿಸುವುದು, ಅದಕ್ಕೆ ಸಂಶೋಧನೆಯಿಂದ ನಿಜ ಸ್ವರೂಪವನ್ನು ಕೊಡುವುದು, ಹೊಚ್ಚ ಹೊಸತರವಾದ ಉದ್ದೇಶದೊಂದಿಗೆ, ಅದಕ್ಕೊಂದು ಹೊಸ ರೀತಿಯ ಆಯಾಮ ಕೊಟ್ಟಂತಾಗುತ್ತದೆ. ಆಯ್ದುಕೊಂಡ ವಿಷಯವನ್ನು ಸಂಶೋಧನೆಗೆ

ತೊಡಗಿಸಿದಾಗ ಅದರ ಇತಿಹಾಸ, ಬೆಳವಣಿಗೆಯ ಅವಸ್ಥೆಗಳು, ಐತಿಹಾಸಿಕ ಅಂಶಗಳು, ಅವುಗಳು ನೀಡಿದ ಕೊಡುಗೆ, ಅವುಗಳ ಮಹತ್ವ, ಉಪಯೋಗ ಮುಂತಾದ ಅಂಶಗಳನ್ನು ಆಕರ ಆಧಾರಗಳಿಂದ ಹೆಕ್ಕಿ ತೆಗೆದು ಸಾದರಪೂರ್ವಕವಾಗಿ ವಿವೇಚಿಸುವುದು ಸಂಶೋಧನೆಗೊಂದು ಹೊಸರೂಪ ಕೊಟ್ಟಂತೆ ಅನಿಸುತ್ತದೆ.

ಆ ನಿಟ್ಟಿನಲ್ಲಿ ೧೯ನೇ ಶತಮಾನದ ಆರಂಭದ ದಿನಗಳಲ್ಲಿ ಉತ್ತರ ಕರ್ನಾಟಕದ ಜನತೆ ವಿದ್ಯಾಭ್ಯಾಸಕ್ಕಾಗಿ ದೂರದ ಪೂಣೆಗೆ ಹೋಗಬೇಕಾಗುತ್ತಿತ್ತು. ಅಷ್ಟೇ ಅಲ್ಲದೆ ಬೆಳಗಾವಿ ಸುತ್ತ ಮುತ್ತಲಿನ ಪ್ರದೇಶದಲ್ಲಿ ಮರಾಠಿಗರ ಪ್ರಭಾವವಿತ್ತು. ಅಂದು ಕನ್ನಡ ಭಾಷೆಗೆ ಈ ಪ್ರದೇಶದಲ್ಲಿ ಮಹತ್ವವೇ ಇಲ್ಲದಂತಾಗಿತ್ತು. ಅಂತಹ ಸಂದರ್ಭದಲ್ಲಿ ಕನ್ನಡ ಜನತೆಗೆ, ಕನ್ನಡ ಭಾಷೆಯ ಉಳಿವಿಗಾಗಿ ಹುಟ್ಟಿಕೊಂಡು ಕಾರ್ಯ ನಿರ್ವಹಿಸುತ್ತಾ ಇರುವ ಜ್ಞಾನಸಂಗಮವೇ ಆಗಿ ನಾಡಿನ ಶೈಕ್ಷಣಿಕ ಜ್ಞಾನದೇಗುಲವೆಂದೇ ಬಿಂಬಿಸಲ್ಪಡುವ 'ಕರ್ನಾಟಕ ಲಿಂಗಾಯಿತ ಎಜ್ಯುಕೇಶನ್ ಸೊಸೈಟಿ'. ಶಿಕ್ಷಣ ಪ್ರಸಾರ ಅಷ್ಟೇ ಅಲ್ಲದೆ ಬಡವರ ಆರೋಗ್ಯ ಸಂಜೀವಿನಿಯಾಗಿ ಹಾಗೂ ಸಾಮಾಜಿಕ ಕಳಕಳಿಯ ಕುರಿತಂತೆ ಸರಕಾರದ ಸಮಾರಂಭಗಳಿಗೆ ಮುಖ್ಯವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸಾಂಸ್ಕೃತಿಕವಾಗಿ ತನ್ನದೇಯಾದ ಕೊಡುಗೆ ನೀಡಿ ಇಂದಿಗೂ ಶಿಕ್ಷಣದ ಪ್ರಸಾರ ಮಾಡುತ್ತ ಸಾಗುತ್ತಿದೆ. ಇಂತಹ ಮೌಲಿಕ ಕಾರ್ಯಗೈಯುತ್ತಿರುವ ಕೆ.ಎಲ್.ಇ. ಸಂಸ್ಥೆಯ ಇತಿಹಾಸವು ಎಲ್ಲರ ಮನ ಮುಟ್ಟಲಿ ಎಂಬ ಸದುದ್ದೇಶದಿಂದ ಈ ವಿಷಯವನ್ನು ಆಯ್ಕೆ ಮಾಡಿಕೊಂಡು ಈ ಮಹಾಪ್ರಬಂಧವನ್ನು ಒಟ್ಟು ೮ ಅಧ್ಯಾಯಗಳಲ್ಲಿ ಅಧ್ಯಯನಿಸಲಾಗಿದೆ.

## ಅಧ್ಯಾಯ – ಒಂದು
## ವಿಷಯ ಪ್ರವೇಶ

ಈ ಅಧ್ಯಾಯದಲ್ಲಿ ಕೆ.ಎಲ್.ಇ. ಸಂಸ್ಥೆಯ ಇತಿಹಾಸ, ಈ ಸಂಸ್ಥೆ ಸಾಮಾಜಿಕ ಕಾಳಜಿಯನ್ನಿಟ್ಟುಕೊಂಡು ವಿವಿಧ ಮಗ್ಗಲುಗಳಲ್ಲಿ ಬೆಳೆದು ಬಂದ ಬಗೆಯನ್ನು ಅರಿಯುವುದು ಹಾಗೂ ಶೈಕ್ಷಣಿಕ ಉದ್ದೇಶದ ಪ್ರತಿಫಲವಾಗಿ ಸಂಸ್ಥೆ ತನ್ನ ವ್ಯಾಪ್ತಿಯನ್ನು ಸಮರೋಪಾದಿಯಲ್ಲಿ ಬೆಳೆಸಿಕೊಂಡು ಬಂದ ಬಗೆಯನ್ನು ವಿವರಿಸಲು ಪ್ರಯತ್ನಿಸಲಾಗಿದೆ.

## ಅಧ್ಯಾಯ – ಎರಡು
## ಕರ್ನಾಟಕದಲ್ಲಿ ಶೈಕ್ಷಣಿಕ ಪರಂಪರೆ–ಪ್ರಮುಖ ಶಿಕ್ಷಣ ಸಂಸ್ಥೆಗಳು

ಈ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಶೈಕ್ಷಣಿಕ ಪರಂಪರೆ ಪ್ರಮುಖ ಶಿಕ್ಷಣ ಸಂಸ್ಥೆಗಳು ಸ್ವತಂತ್ರಪೂರ್ವದ ಶಿಕ್ಷಣ ಪದ್ಧತಿ, ಪ್ರಮುಖ ಶಾಲಾ–ಕಾಲೇಜುಗಳು, ವಿದ್ಯಾಭ್ಯಾಸದ ಅವಕಾಶ, ಶಿಕ್ಷಣ ಪದ್ಧತಿ ಹಾಗೂ ಶೈಕ್ಷಣಿಕ ಪರಿಸರದ ಬಗ್ಗೆ ವಿವರಿಸಲಾಗಿದೆ.

## ಅಧ್ಯಾಯ – ಮೂರು

## ಕೆ.ಎಲ್.ಇ. ಸಂಸ್ಥೆ ನಡೆದು ಬಂದ ದಾರಿ

ಈ ಅಧ್ಯಾಯದಲ್ಲಿ ಕೆ.ಎಲ್.ಇ. ಸಂಸ್ಥೆ ನಡೆದು ಬಂದ ದಾರಿ ಹಿನ್ನೆಲೆಯನ್ನು ಇಟ್ಟುಕೊಂಡು ಚಾರಿತ್ರಿಕ ಹಿನ್ನೆಲೆ, ಕೆ.ಎಲ್.ಇ. ಸಂಸ್ಥೆಯ ಸ್ಥಾಪನೆಗೆ ಪ್ರೇರಣೆಯನ್ನಿತ್ತ ಸಂಸ್ಥೆಗಳು, ಸಪ್ತರ್ಷಿಗಳ ಕನಸಿನ ಕೂಸಾದ ಕೆ.ಎಲ್.ಇ. ಸಂಸ್ಥೆಯ ಸ್ಥಾಪನೆಯಲ್ಲಿ ಸಪ್ತರ್ಷಿಗಳ ಯೋಚನೆ-ಯೋಜನೆಗಳು, ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪಕ ಸದಸ್ಯರು, ಕೆ.ಎಲ್.ಇ. ಸಂಸ್ಥೆಯ ಬೆಳವಣಿಗೆಯಲ್ಲಿ ಮಹಾದಾನಿಗಳ, ಮಹಿಳಾದಾನಿಗಳ ಕುರಿತು ಕೂಲಂಕುಷವಾಗಿ ವಿಶ್ಲೇಷಿಸಲಾಗಿದೆ.

## ಅಧ್ಯಾಯ – ನಾಲ್ಕು

## ಕೆ.ಎಲ್.ಇ. ಸಂಸ್ಥೆ ನಡೆದು ಬಂದ ದಾರಿ

ಈ ಅಧ್ಯಾಯದಲ್ಲಿ ಕೆ.ಎಲ್.ಇ. ಸಂಸ್ಥೆಯು ನಡೆದು ಬಂದ ದಾರಿ ಭಾಗ–೨, ಎಂದು ಅಧ್ಯಯನಕ್ಕಾಗಿ ವಿಭಾಗಿಸಿಕೊಂಡು ಸಂಸ್ಥೆಯ ಸ್ಥಾಪನೆಗಾಗಿ ಬೆವರು ಸುರಿಸಿದ ಏಳು ಜನ ಸಪ್ತರ್ಷಿಗಳಾದ ಶ್ರೀ ಎಂ. ಆರ್. ಸಾಖರೆ, ಶ್ರೀ ಶಿ.ಶಿ. ಬಸವನಾಳ, ಶ್ರೀ ಪಂಡಿತಪ್ಪ ಚಿಕ್ಕೋಡಿ, ಶ್ರೀ ಎಚ್. ಎಫ್. ಕಟ್ಟಿಮನಿ, ಶ್ರೀ ಬಿ.ಬಿ. ಮಮದಾಪೂರ, ಶ್ರೀ ಬಿ.ಎಸ್. ಹಂಚಿನಾಳ, ಶ್ರೀ ಸರದಾರ ವೀರನಗೌಡರ ಶೈಕ್ಷಣಿಕ, ಸಾಹಿತ್ಯ ಕ್ಷೇತ್ರ ಇತ್ಯಾದಿ ವಿವರಗಳನ್ನು ಹಾಗೂ ಕೆ.ಎಲ್.ಇ. ಸಂಸ್ಥೆಗೆ ಈ ಮಹಾನುಭಾವರು ನೀಡಿದ ಕೊಡುಗೆಯನ್ನು ಪೂರಕ ಆಕರ ಸಾಮಗ್ರಿಗಳ ಮೂಲಕ ಸಂಪೂರ್ಣವಾಗಿ ವಿವರಿಸಲಾಗಿದೆ.

## ಅಧ್ಯಾಯ – ಐದು

## ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಸಂಸ್ಥೆಗಳು

ಈ ಅಧ್ಯಾಯದಲ್ಲಿ ಕೆ.ಎಲ್.ಇ. ಸಂಸ್ಥೆಯ ಅಂಗ, ಅಧೀನ ಸಂಸ್ಥೆಗಳ ವಿಸ್ತಾರವನ್ನು ಹೇಳಲಾಗಿದೆ. ಪೂರ್ವ ಪ್ರಾಥಮಿಕ, ಶಾಲಾ ಕಾಲೇಜುಗಳ ಹಾಗೂ ಮಹಾವಿದ್ಯಾಲಯಗಳ ಬಗ್ಗೆ ಸಹ ವಿವರಿಸಲಾಗಿದೆ.

## ಅಧ್ಯಾಯ – ಆರು

## ಆಡಳಿತ ಸಂಸ್ಥೆಯಾಗಿ

ಈ ಅಧ್ಯಾಯದಲ್ಲಿ ಕೆ.ಎಲ್.ಇ. ಸಂಸ್ಥೆಯ ಆಡಳಿತದ ಬಗ್ಗೆ ವಿವರಿಸುತ್ತಾ, ಮೊದಲಿಗೆ ಸಂಸ್ಥೆಯ ಅಂಗವಿನ್ಯಾಸ-ಲಾಂಛನದ ವಿಸ್ತಾರ ರೂಪ, ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಸಮರ್ಥ

ಕಾರ್ಯಾಧ್ಯಕ್ಷರಾಗಿ ಡಾ. ಪ್ರಭಾಕರ ಕೋರೆ, ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿ, ಪ್ರಧಾನ ಆಡಳಿತ ಕಛೇರಿಯ ಬಗ್ಗೆ ಹೇಳಲಾಗಿದೆ.

## ಅಧ್ಯಾಯ – ಏಳು
## ಸಾಂಸ್ಕೃತಿಕ ಕ್ಷೇತ್ರಕ್ಕೆ ಕೆ.ಎಲ್.ಇ. ಸಂಸ್ಥೆಯ ಕೊಡುಗೆ

ಈ ಅಧ್ಯಾಯದಲ್ಲಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೆ.ಎಲ್.ಇ. ಸಂಸ್ಥೆಯ ಕೊಡುಗೆ ಎಂಬ ಶೀರ್ಷಿಕೆಯಡಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡಿದ ಕೆ.ಎಲ್.ಇ. ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಾಹಿತ್ಯ ಕೃಷಿಯ ಬಗ್ಗೆ ವಿವರಿಸಲಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿಸುವಲ್ಲಿ ಸಂಸ್ಥೆಯ ಪಾತ್ರ, ವಿಧಾನಸಭಾ ಅಧಿವೇಶನ, ವಿಶ್ವಕನ್ನಡ ಸಮ್ಮೇಳನ, ಪ್ರಮುಖ ಸಮಾರಂಭಗಳು, ಕನ್ನಡ ನಾಡು ನುಡಿಯ ಸಂವರ್ಧನೆಯಲ್ಲಿ ಸಂಸ್ಥೆಯ ಪಾತ್ರ, ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಲ್ಲಿ ಕೆ.ಎಲ್.ಇ. ಸಂಸ್ಥೆಯ ಪಾತ್ರ ಹಾಗೂ ರೋಗಿಗಳ ಸಂಜೀವಿನಿಯಾದ ಆಸ್ಪತ್ರೆ ಇವೆಲ್ಲವುಗಳ ಸಂಪೂರ್ಣ ವಿವರವನ್ನು ನೀಡಲಾಗಿದೆ.

## ಅಧ್ಯಾಯ – ಎಂಟು
## ಸಮಾರೋಪ

ಈ ಅಧ್ಯಾಯದಲ್ಲಿ ಎಲ್ಲಾ ಅಧ್ಯಾಯಗಳನ್ನಿಟ್ಟುಕೊಂಡು ಕೆ.ಎಲ್.ಇ. ಸಂಸ್ಥೆ ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮಾಡಿದ ಕಾರ್ಯವಿಶ್ಲೇಷಣೆಯೊಂದಿಗೆ ಅಧ್ಯಯನದ ಫಲಶೃತಿಗಳನ್ನು ವಿವೇಚಿಸಲಾಗಿದೆ.

ಕೆ.ಎಲ್.ಇ. ಸಂಸ್ಥೆ ನಿತ್ಯ ನಿರಂತರ. ವ್ಯಕ್ತಿ ಬರುತ್ತಾನೆ, ಹೋಗುತ್ತಾನೆ, ಸಂಸ್ಥೆ ಮಾತ್ರ ಚಿರಂತನ. ೧೯೧೬ ರಿಂದಲೂ ಈವರೆಗೆ ಸಂಸ್ಥಾಪಕ ಅಜೀವ ಸದಸ್ಯರಿಂದ ಮೊದಲ್ಗೊಂಡು ಇಂದಿನ ಪದಾಧಿಕಾರಿಗಳವರೆಗೂ ಅನೇಕಾನೇಕ ಅಭಿಮಾನಿ ವ್ಯಕ್ತಿಗಳು ಸಂಸ್ಥೆಯ ಪ್ರಗತಿಗಾಗಿ ಶ್ರಮಿಸುತ್ತ ಬಂದಿದ್ದಾರೆ. ನಡೆಯುವವನು ಮಾತ್ರ ಎಡಹುತ್ತಾನಲ್ಲದೆ ಕುಳಿತವರು ಎಡಹಬಲ್ಲರೆ? ಕೆಲಸ ಮಾಡುವವನೇ ತಪ್ಪುತ್ತಾನೆ. ಆದರೆ ಕೆಲಸ ಮಾಡದೆ ದೂರ ಕುಳಿತು ಕೇವಲ ಟೀಕೆ ಮಾಡುವವರೇ ಇಂದು ಅಧಿಕ ಸಂಖ್ಯೆಯಲ್ಲಿರುವಾಗ, ಅವರನ್ನೆಲ್ಲ ತೃಪ್ತಿಪಡಿಸಲು ದೇವರಿಗೂ ಸಾಧ್ಯವಿಲ್ಲ. ೧೯೧೬ ರಲ್ಲಿ ಕೆ.ಎಲ್.ಇ. ಸಂಸ್ಥೆ ಪ್ರಾರಂಭಗೊಂಡಾಗ ಸ್ಥಿತಿ ಏನಿತ್ತು? ಈಗ ಏನಿದೆ? ಶೂನ್ಯದಿಂದ ಬ್ರಹ್ಮಾಂಡ ನಿರ್ಮಿಸಿದ ಸಂಸ್ಥಾಪಕರು ಹಾಗೂ ಅವರ ನಂತರ ಅಧಿಕಾರದಲ್ಲಿದ್ದವರು ಸಂಸ್ಥೆಯನ್ನು ಮುನ್ನಡೆಸಿಕೊಂಡು ಬಂದ ರೀತಿ ಪ್ರಶಂಸನೀಯವಾಗಿದೆ. ಅಂತೆಯೇ ಈ ಸಂಸ್ಥೆ ಅನೇಕ ಅಂಗ ಸಂಸ್ಥೆಗಳನ್ನು ನಡೆಸುವ ರಾಷ್ಟ್ರದ ಪ್ರಮುಖ ಶಿಕ್ಷಣ ಸಂಸ್ಥೆ ಎನಿಸಿದೆ. ಅನೇಕ

ಕೋಟಿ ರೂಪಾಯಿಗಳಿಗೂ ಮಿಕ್ಕಿದ ಆಸ್ತಿ ಪಡೆದಿರುವ ಈ ಸಂಸ್ಥೆಯಲ್ಲಿ ಲೆಕ್ಕವಿಲ್ಲದಷ್ಟು ನೌಕರವರ್ಗ ಹಾಗೂ ಅಸಂಖ್ಯ ವಿದ್ಯಾರ್ಥಿವೃಂದ ಇರುವುದು. ಇದು ಎಲ್ಲರಿಗೂ ಅಭಿಮಾನದ ಸಂಗತಿಯಾಗಿದೆ. ಸಂಸ್ಥೆ ಬೆಳೆಯುತ್ತ ಹೋದ ಹಾಗೆ ಸಮಸ್ಯೆಗಳು ಬೆಳೆಯುತ್ತ ಹೋಗುತ್ತವೆ. ಅವುಗಳನ್ನು ಚಾಣಾಕ್ಷತನದಿಂದ ಬಗೆಹರಿಸುತ್ತ, ಸಂಸ್ಥೆಯ ಹಿತರಕ್ಷಣೆ ಮಾಡುತ್ತ ಸಂಸ್ಥೆಯನ್ನು ಮುನ್ನಡೆಸಬೇಕಾಗುತ್ತದೆ. ಅದೇ ರೀತಿಯಲ್ಲಿ ಕೆ.ಎಲ್. ಇ. ಸಂಸ್ಥೆ ಮುನ್ನಡೆದಿದೆ. ಸಂಸ್ಥೆಯನ್ನು ಕಟ್ಟಿದ ಸಪ್ತರ್ಷಿಗಳ ಅಖಂಡ ಆಶೀರ್ವಾದದ ಬಲದಿಂದ ಈ ಸಂಸ್ಥೆ ಅನೇಕ ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ನಿಂತಿದೆ.

ಹಳ್ಳಿಯಿಂದ ದಿಲ್ಲಿಯವರೆಗೂ ತನ್ನ ಕಾರ್ಯಕ್ಷೇತ್ರವನ್ನು ಪಸರಿಸಿಕೊಂಡಿರುವ ಕೆ.ಎಲ್.ಇ. ಒಂದು ಸ್ವತಂತ್ರ ವಿಶ್ವವಿದ್ಯಾಲಯವಾಗುವಷ್ಟು ಬೆಳೆದು ನಿಂತಿದೆ. ಬೆಳಗಾವಿಯ ಒಂದು ದಿನಪತ್ರಿಕೆಯಂತೂ ಇಂಥ ವಿಶ್ವವಿದ್ಯಾಲಯ ಆಗಬೇಕೆಂದು ಸೂಚಿಸುತ್ತ ವಿಶ್ವವಿದ್ಯಾಲಯ ಎಂಬುದಾಗಿ ನಾಮಕರಣ ಮಾಡಬೇಕೆಂದು ಹೇಳಿರುವುದು ಗಮನಾರ್ಹವಾಗಿದೆ.

ಕೆ.ಎಲ್.ಇ. ಸಂಸ್ಥೆಯ ಇತಿಹಾಸ ಬರೆಯುವುದು ಅಷ್ಟು ಸುಲಭದ ಕೆಲಸವಲ್ಲ. ಅಂತೆಯೇ ಇದು ಇತಿಹಾಸವಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಕಳೆದ ೮೦ ವರ್ಷಗಳಿಂದ ಕೆ.ಎಲ್.ಇ. ಸಂಸ್ಥೆ ಸಲ್ಲಿಸಿದ ಸೇವೆ, ನೀಡಿದ ಕೊಡುಗೆ ಉಲ್ಲೇಖನೀಯವಾಗಿದೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಡಾಕ್ಟರರು, ಸಾವಿರ ಸಾವಿರ ಸಂಖ್ಯೆಯಲ್ಲಿ ಇಂಜಿನಿಯರರು, ಲಕ್ಷ ಲಕ್ಷ ಸಂಖ್ಯೆಯಲ್ಲಿ ಪದವೀಧರರು, ಕೆ.ಎಲ್.ಇ.ಸೊಸೈಟಿಯ ವಿವಿಧ ಕಾಲೇಜುಗಳ ಮೂಲಕ ಶಿಕ್ಷಣ ಪಡೆದು ಕೃತ ಕೃತ್ಯರಾಗಿದ್ದಾರೆ. ಸಾವಿರಾರು ಜನರ ಬದುಕಿಗೆ ಹೊಸ ಬೆಳಕು ಹಾಗೂ ಹೊಸ ಅರ್ಥ ನೀಡಿರುವ ಕೆ.ಎಲ್.ಇ. ವೀರಶೈವ ಸಮಾಜದ ಪ್ರಾತಿನಿಧಿಕ ಸಂಸ್ಥೆ. ಇದರ ರಕ್ಷಣೆ ಪ್ರತಿಯೊಬ್ಬರ ಹೊಣೆಯೂ ಹೌದು. ಇದು ನಮ್ಮದೆನ್ನುವ ಅಭಿಮಾನ ಮಾತ್ರ ರಕ್ಷಾಕವಚದಂತೆ ರಕ್ಷಣೆ ಒದಗಿಸಬಲ್ಲದೆಂದು ಮನಗಾಣಿಸುವ ಪ್ರಯತ್ನವಿದಾಗಿದೆ.